

# ಮರೆಯಲಿ ಹ್ಯಾಂಗ...?

ಮನುಷ್ಯನ ಮಹತ್ವಾಕಾಂಕ್ಷೆ ಮತ್ತು ಅತಿರೇಕ – ಎರಡಕ್ಕೂ ಉದಾಹರಣೆಯ ರೂಪದಲ್ಲಿರುವ ಆಧುನಿಕ ಚೀನಾದ ಶಿಲ್ಪಿ ಮಾವೋತ್ಸೆತುಂಗ. ತನ್ನ ದೇಶವನ್ನು ಇನ್ನಿಲ್ಲದಂತೆ ಪ್ರೀತಿಸಿದ, ಹೊರಜಗತ್ತಿನ ಸಂಪರ್ಕದಿಂದ ಹಾಳಾಗಬಾರದೆಂದು ತನ್ನ ದೇಶಕ್ಕೆ ಸ್ವಯಂ ದಿಗ್ಬಂಧನಗಳನ್ನು ಹಾಕಿದ ಮಾವೋ ಚೀನೀಯರ ಪಾಲಿಗೆ ಏಕಮೇವಾದ್ವಿತೀಯ ನಾಯಕ. ಬೃಹತ್ ಕೈಗಾರಿಕಾ ಶಕ್ತಿ ಹಾಗೂ ಮಿಲಿಟರಿ ಶಕ್ತಿಯೊಂದಿಗೆ ತನ್ನದೇ ಆದ ಸಿಕ್ಕುಗಳನ್ನು ಪರಿಹರಿಸಿಕೊಳ್ಳಲಾಗದ ಚೀನಾದ ಇಂದಿನ ವೈರುಧ್ಯಗಳಿಗೆ ಮಾವೋನ ಕೊಡುಗೆ ಸಾಕಷ್ಟಿದೆ. ಕೊರೊನಾ ವೈರಸ್ ಹಾಗೂ ಭಾರತದೊಂದಿಗಿನ ಗಡಿಯಲ್ಲಿನ ತಕರಾರಿನ ಕಾರಣದಿಂದಾಗಿ ಪ್ರಸ್ತುತ ಸುದ್ದಿಯಲ್ಲಿರುವ ದೇಶದ ‘ರೆಡ್ ಎಂಪರರ್’ ಬಗೆಗಿನ ನೆನಪು, ಈ ಹೊತ್ತಿನ ಚೀನಾದ ವೈರುಧ್ಯಗಳನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ಸಹಕಾರಿಯಾಗಬಲ್ಲದು.

■ ಎಸ್.ಪಿ. ವಿಜಯಲಕ್ಷ್ಮಿ